**ಒಎಸ್ ಸಂ.ಃ175/2013**
**ಪಿಡಬ್ಲ್ಯೂ ಃ 2**
**ದಿನಾಂಕ 01-02-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಕೆಆರ್‌ಆರ್ ವಕೀಲರಿಂದ**

**ನಾನು ಪ್ರಥಮ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಾಯಿಯ ಪರವಾಗಿ ನಾನು ಸಾಕ್ಷ್ಯ ಹೇಳಲು ಬಂದಿರುತ್ತೇನೆ. ನನ್ನ ತಾಯಿಗೆ ಸರಿಯಾಗಿ ಕಿವಿ ಕೇಳುವುದಿಲ್ಲ ಮತ್ತು ನರ ದುರ್ಬಲತೆ, ಹೆಚ್ಚಿನ ರಕ್ತದೊತ್ತಡ ಇರುತ್ತದೆ. ನನ್ನ ತಾಯಿಗೆ ಸುಮಾರು 2 ವರ್ಷಗಳಿಂದ ಅನಾರೋಗ್ಯ ಇದೆ. ಇದರ ಕುರಿತು ದಾಖಲೆಗಳು ಇರುವುದಿಲ್ಲ. ನನ್ನ ತಾಯಿ ಆರೋಗ್ಯವಾಗಿದ್ದು ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಲು ಏನೂ ತೊಂದರೆ ಇಲ್ಲದೇ ಇದ್ದರೂ ಕೂಡ ನಾನು ವಿದ್ಯಾವಂತಳಾಗಿದ್ದರಿಂದ ಈ ಕೇಸಿನ ವಿಚಾರ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇಸಿನ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಾನು 27 ಮಂದಿಯ ಮೇಲೆ ಕೇಸು ಹಾಕಿರುತ್ತೇನೆ. ಪ್ರತಿವಾದಿ 25 ರಿಂದ 27 ರವರು ಖರೀದಿದಾರರಾಗಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಲಾಗಿದೆ. ನಾನು 3ನೇ ವಾದಿಯ ಪರ ಸಾಕ್ಷ್ಯ ಹೇಳುತ್ತಿದ್ದೇನೆ. ಪ್ರತಿವಾದಿ 7, 9 ರಿಂದ 11 ಮತ್ತು 19 ರವರು ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ನಮ್ಮ ತಾತನಿಂದ ಬಂದಿರುತ್ತದೆ. ಮುನಿಯಪ್ಪ ನಮ್ಮ ತಾತ ಎಂದು ತೋರಿಸಲು ಹಾಗೂ ಅವರ ವಂಶಸ್ಥರನ್ನು ತೋರಿಸಲು ನಾನು ವಂಶವೃಕ್ಷವನ್ನು ಕೊಟ್ಟಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ನಮ್ಮ ಅಜ್ಜಿ ಸೀತಮ್ಮ ಬರೆದಿರುತ್ತಾರೆ. ವಂಶವೃಕ್ಷವನ್ನು ತಾಲ್ಲೂಕು ಕಚೇರಿಯಿಂದ ತಂದಿರುತ್ತಾರೆ. ವಂಶವೃಕ್ಷಕ್ಕೆ ಯಾರು ಸಾಕ್ಷಿ ಸಹಿ ಮಾಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಸಾಕ್ಷಿ ಸಹಿ ಯಾರೂ ಮಾಡಿಲ್ಲ ಎಂದು ಹೇಳುತ್ತಾರೆ.**

**ನಮ್ಮ ತಾತ ಮುನಿಯಪ್ಪನಿಗೆ ಇಬ್ಬರು ಮಕ್ಕಳು ಅವರು ಚೆಂಗಲರಾಯಪ್ಪ ಮತ್ತು ದೊಡ್ಡಪಾಪಣ್ಣ ಎಂದು ಅಜ್ಜಿ ಹೇಳಿರುತ್ತಾರೆ. ಇದನ್ನು ತೋರಿಸಲು ವಂಶವೃಕ್ಷ ಬಿಟ್ಟು ಬೇರೆ ದಾಖಲೆಗಳು ಇರುವುದಿಲ್ಲ. ಮುನಿಯಪ್ಪನಿಗೆ ಇಬ್ಬರು ಮಕ್ಕಳು ಅವರು ದೊಡ್ಡವೆಂಕಟಪ್ಪ ಮತ್ತು ಚಿಕ್ಕವೆಂಕಟಪ್ಪ ಎಂದರೆ ಸರಿಯಲ್ಲ. ದೊಡ್ಡವೆಂಕಟಪ್ಪನಿಗೆ ಇಬ್ಬರು ಮಕ್ಕಳು ಅವರು ಪಾಪಣ್ಣ ಮತ್ತು ಚೆಂಗಲರಾಯಪ್ಪ ಎಂದರೆ ಸರಿಯಲ್ಲ. ಚಿಕ್ಕವೆಂಕಟಪ್ಪನಿಗೆ ಒಬ್ಬನೇ ಮಗ ಮುನಿವೆಂಕಟಪ್ಪ ಎಂದರೆ**

ಸರಿಯಲ್ಲ. ಪಾಪಣ್ಣ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಪಾಪಣ್ಣ ಮುನಿಯಪ್ಪನಿಗೆ ಯಾವ ರೀತಿಯ ಸಂಬಂಧ ಎಂದು ನನಗೆ ಹೇಳಲು ಬರುವುದಿಲ್ಲ. ಪೆದ್ದಪ್ಪಯ್ಯನ ಇನ್ನೊಂದು ಹೆಸರು ಪೆದ್ದಪಾಪಣ್ಣ ಎಂದು ಕರೆಯುತ್ತಿದ್ದರು. ಪೆದ್ದಪ್ಪನನ್ನು ಅಲಿಯಾಸ್ ಮುನಿಯಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ.

ಮುನಿವೆಂಕಟಪ್ಪರವರನ್ನು ಕಿಚ್ಚಪ್ಪ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಪೆದ್ದಪ್ಪಯ್ಯನಿಗೆ ಎಷ್ಟು ಜನ ಹೆಂಡತಿಯರು ಎಂದು ನನಗೆ ಗೊತ್ತಿರುವುದಿಲ್ಲ. ಅವರಿಗೆ ಇಬ್ಬರು ಹೆಂಡತಿಯರು ಅವರು ಚಿನ್ನಮ್ಮ ಮತ್ತು ಈರಮ್ಮ ಎಂದರೆ ನನಗೆ ಗೊತ್ತಿರುವುದಿಲ್ಲ. ಚಿನ್ನಮ್ಮನಿಗೆ ನಾರಾಯಣಮ್ಮ ಮತ್ತು ನಾರಾಯಣಪ್ಪ ಎಂಬ ಇಬ್ಬರು ಮಕ್ಕಳು 2ನೇ ಹೆಂಡತಿಗೆ ಮುನಿವೆಂಕಟಪ್ಪ ಮತ್ತು ವೆಂಕಟರಾಮಪ್ಪ ಎಂದರೆ ಸರಿ. ನಾರಾಯಣಮ್ಮನಿಗೆ ವೆಂಕಟೇಶಪ್ಪ, ಕೃಷ್ಣಮೂರ್ತಿ, ರಾಮಣ್ಣ, ತಿಪ್ಪಣ್ಣ ಮತ್ತು ಬಾಬು ಎನ್ನುವ ಮಕ್ಕಳು ಎಂದರೆ ಸರಿ. ವೆಂಕಟೇಶ್, ಮುನಿಸ್ವಾಮಿ, ಶ್ರೀನಿವಾಸ್ ರವರು ಮುನಿವೆಂಕಟಪ್ಪ ಅಲಿಯಾಸ್ ಕಿಚ್ಚಪ್ಪನ ಮಕ್ಕಳು ಎಂದರೆ ಸರಿ. ವೆಂಕಟೇಶ್ ಇವರಿಗೆ ಸಾವಿತ್ರಮ್ಮ ಹೆಂಡತಿ ಮತ್ತು ಶೇಖರ್, ಸತೀಶ್ ಎನ್ನುವ ಮಕ್ಕಳು ಎಂದರೆ ಸರಿ. ಸತೀಶ ತೀರಿಕೊಂಡಿದ್ದು ಅವರ ಹೆಂಡತಿ ಭಾರತಿಯಾಗಿದ್ದು ಅವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಅವರುಗಳು ಅಕನಾಕ್ಷ ಮತ್ತು ಸಹನಾ ಎಂದರೆ ನನಗೆ ಹೆಸರು ಗೊತ್ತಿರುವುದಿಲ್ಲ. ಸತೀಶನ ಮಕ್ಕಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿ.

ಮುನಿಸ್ವಾಮಿಯ ಹೆಂಡತಿಯ ಹೆಸರು ಗೊತ್ತಿರುವುದಿಲ್ಲ. ಶ್ರೀನಿವಾಸ್ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶ್ರೀನಿವಾಸರವರ ಹೆಂಡತಿ ಹೆಸರು ಲಕ್ಷ್ಮೀದೇವಮ್ಮ ಅವರಿಗೆ ಸುಗುಣ, ವಿಜಯಲಕ್ಷ್ಮೀ ಮತ್ತು ಪದ್ಮಾವತಿ ಎನ್ನುವ ಮಕ್ಕಳು ಎಂದರೆ ಸರಿ. ವೆಂಕಟಪ್ಪನ ಹೆಂಡತಿ ಸರಸಮ್ಮ ಎಂದರೆ ಸರಿ. ಅವರಿಗೆ ಶ್ರೀಧರ, ರಮೇಶ್, ಪ್ರಕಾಶ್, ವಿಜಯಲಕ್ಷ್ಮೀ, ಗೀತಮ್ಮ ಎನ್ನುವ ಮಕ್ಕಳು ಎಂದರೆ ಸರಿ. ಚಂಗಲರಾಯಪ್ಪ ಇವರ ಹೆಂಡತಿಯ ಹೆಸರು ಅಕ್ಕಮ್ಮ ಎಂದರೆ ಸಾಕ್ಷಿಯು ಅಂಕಿಯಮ್ಮ ಎಂದು ಕರೆಯುತ್ತಿದ್ದರು ಎಂದು ಹೇಳುತ್ತಾರೆ. ಅವರಿಗೆ ಇಬ್ಬರು ಮಕ್ಕಳು ಮುನಿಯಪ್ಪ ಮತ್ತು ಚಿಕ್ಕವೆಂಕಟಪ್ಪ ಎಂದರೆ ಸರಿ. ಮುನಿಯಪ್ಪನಿಗೆ ಮೂರು ಜನ ಮಕ್ಕಳು ಅವರೆಂದರೆ ಸುಬ್ರಮಣಿ, ಸೀನಪ್ಪ ಮತ್ತು ಚಂಗಲರಾಯಪ್ಪ ಎಂದರೆ ಸರಿ. ಚಂಗಲರಾಯಪ್ಪ ಜೀವಂತ ಇದ್ದಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ ಚಂಗಲರಾಯಪ್ಪನನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುವುದಿಲ್ಲ.

ಚಂಗಲರಾಯಪ್ಪನ 2ನೇ ಮಗ ಚಿಕ್ಕವೆಂಕಟಪ್ಪ ಆತನ ಹೆಂಡತಿ ಸೀತಮ್ಮ. ಅವರಿಗೆ ಮೂರು ಜನ ಮಕ್ಕಳು ಅವರುಗಳು ನಾರಾಯಣಸ್ವಾಮಿ, ಸೋಮಶೇಖರ ಮತ್ತು ರೆಡ್ಡಮ್ಮ ಎಂದರೆ ಸರಿ. ಸೋಮಶೇಖರವರ ಹೆಂಡತಿ ಶಕುಂತಲಮ್ಮ ಅವರ ಮಕ್ಕಳು ರೆಡ್ಡಮ್ಮ, ರೇಣುಕಾ ಮತ್ತು ರೇವತಿ ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.